ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾದಿಕಾರಿಯವರ ನ್ಯಾಯಾಲಯ ಚನ್ನಪಟ್ಟಣ.

**ಎಂ ವಿ ಸಿ 575 /2014**

| | |
|---|---|
| ಹೆಸರು | : ಆರ್ ವೆಂಕಟೇಶ್ |
| ಗಂಡನ ಹೆಸರು | : ರಾಮಣ್ಣ |
| ವಯಸ್ಸು | : 46 ವರ್ಷ |
| ಉದ್ಯೋಗ | : ಪಿ ಐ, |
| ವಾಸ | : ಬೆಂಗಳೂರು. |

ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ. ಎಂ ಕೆ ಎನ್ ವಕೀಲರಿಂದಃ

ಈ ಪ್ರಕರಣಕ್ಕೆ ಸಂಬಂದ ಪಟ್ಟಂತೆ ದಿ 01.08.2014 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದಾರರು ಬಾಲಗಂಗಾಧರ್ ರವರು ಠಾಣೆಗೆ ಸಂಜೆ 5.00 ಗಂಟೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮ್ಮೆ ಸಂಖ್ಯೆ 302/2014 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಪಿರ್ಯಾದಾರರು ನೀಡಿದ ದೂರಿನ ಪ್ರಕಾರ ಕೆಎ-01-ಇಹೆಚ್-6719ರ ಪಿರ್ಯಾದುದಾರರ ತಂದೆ ನಾಗರಾಜುರವರು ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಕೆಎ-45-ಜೆ-4545 ರ ದ್ವಿ ಚಕ್ರ ವಾಹನ ಅತೀ ವೇಗ ಮತ್ತು ಅಜಾಗರುಕತೆಯಿಂದ ಬಂದು ಡಿಕ್ಕಿ ಹೊಡೆದು ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯವುಂಟು ಮಾಡಿ ಸ್ಥಳದಲ್ಲಿ ಮೋಟಾರ್ ಸೈಕಲ್ ನ್ನು ನಿಲ್ಲಿಸದೆ ಪರಾರಿಯಾಗಿದ್ದಾರೆಂದು ದೂರಿನಲ್ಲಿ ತಿಳಿಸಿದ್ದಾರೆ. ಅನಂತರ ಸ್ಥಳ ಕ್ಕೆ ಭೇಟಿ ನೀಡಿ ತನಿಖೆ ನಡೆಸಿ ಯಾರ ತಪ್ಪಿ ನಿಂದ ಅಪಘಾತ ಆಗಿದೆ ಎಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ. ಅಪಘಾತವಾದ ನಂತರ ಸರ್ಕಾರಿ ಆಸ್ಪತ್ರೆಯಿಂದ ಮಾಹಿತಿ ಬಂದಿದೆ ಎಂದರೇ ಹೌದು. ಮಾಹಿತ ಬಂದಾಗ ಆತ ಮದ್ಯ ಪಾನ ಮಾಡಿದ್ದ ಎಂಬ ಬಗ್ಗೆ ಎಲ್ಲಿಯೂ ಸಹ ಉಲ್ಲೇಖ ಇರಲಿಲ್ಲ.

2. ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಆರೋಪಿಗೆ ಚಾಲನ ಪರವಾನಿಗೆ ಮತ್ತು ಆತ ಚಾಲಯಿಸಿದ ವಾಹನಕ್ಕೆ ವಿಮಾ ಇತ್ತು ಎಂದು ಕಂಡು ಬಂದ ನಂತರ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದೇನೆ. ನಿಪಿ-2 ರಲ್ಲಿ ಆರೋಪಿಗೆ ಚಾಲನ ಪರವಾನಿಗೆ ಮತ್ತು ಆತ ಚಾಲಯಿಸಿದ ವಾಹನಕ್ಕೆ ವಿಮೆ ಇಲ್ಲ ಎಂದು ತಿಳಿಸಿಲ್ಲ. ಒಂದು ವೇಳೆ ಇದ್ದಾರೆ ಅದನ್ನು ಅಂತಿಮ ವರದಿಯಲ್ಲಿ ತಿಳಿಸುತ್ತಿದ್ದೇವು.

ನನಗೆ ನಿಮಾನ್ಸ್ ಆಸ್ಪತ್ರೆಯಿಂದ ಅರ್ಜಿದಾರರು ಮದ್ಯಪಾನ ಮಾಡಿದ ಬಗ್ಗೆ ಯಾವುದೇ ಮಾಹಿತಿಗಳು ಬಂದಿರುವುದಿಲ್ಲ.

ಪಾಟೀ ಸವಾಲು : 2ನೇ ಎದುರುದಾರ ಪರ ಶ್ರೀ. ಸಿ ಕೆ ಎಂ ವಕೀಲರಿಂದಃ

ಈ ಪ್ರಕರಣದಲ್ಲಿ ನಾನೇ ತನಿಖಾಧಿಕಾರಿ ಎಂದರೇ ಹೌದು. ಅಪಘಾತವಾಗಿ ದೂರು ನೀಡಿದ ನಂತರ ಅಪಘಾತಕ್ಕೆ ಯಾರು ಕಾರಣ ಎಂದು ತನಿಖೆ ಮಾಡುತ್ತೇವೆ ಎಂದರೇ ಹೌದು. ಅಪಘಾತವಾದ ನಂತರ ಆರೋಪಿ ಮತ್ತು ವಾಹನ ಸಂಖ್ಯೆಯನ್ನು ಪತ್ತೆ ಹಚ್ಚಿ ದ್ದೇವೆ. ಆ ವಾಹನದ ಮಾಲೀಕರು ಯಾರು ಎಂದು ಆರ್ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆ. ಮಾಲೀಕನ ಹೆಸರು ಏನು ಎಂದರೇ ಈಗ ನನಗೆ ನೆನಪಿಲ್ಲ. ಆ ವಾಹನವನ್ನು ಕಿರಣ್ ಕುಮಾರ್ ಎಂಬುವವರು ಚಾಲಾಯಿಸುತ್ತಿದ್ದರು. ಕಿರಣ್ ಕುಮಾರ್ ಎಂಬುವವರು ವಾಹನ ಚಾಲನೆ ಮಾಡುತ್ತಿದ್ದ ಕಾರಣ ವಾಹನವನ್ನು ಮತ್ತು ಡಿ ಎಲ್ ನ್ನು ಸ್ವಾಧೀನ ಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರ ಎಂದರೇ ಜೆರಾಕ್ಸ್ ಪ್ರತಿ ಹಾಜರುಪಡಿಸಿದ್ದೇನೆ. ಜೆರಾಕ್ಸ್ ಪ್ರತಿ ಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರ ಎಂದರೇ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಗಾಯಾಳುವಿನ ಡಿ ಎಲ್ ನ್ನು ಸ್ವಾಧೀನ ಪಡಿಸಿ ಹಾಜರುಪಡಿಸಿದ್ದೀರ ಎಂದರೇ ಸಾಕ್ಷಿ ಗಾಯಾಳು ಚಿಕಿತ್ಸೆ ಪಡೆದುಕೊಂಡು ಬಂದು ನನ್ನ ಮುಂದೆ ಹಾಜರಾದ ನಂತರ ಡಿ ಎಲ್ ಬಗ್ಗೆ ವಿಚಾರಿಸಿದಾಗ ಡಿ ಎಲ್ ಇದೆ ಆದರೆ ಅದು ಎಲ್ಲಿದೆ ಎಂದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ.

2. ಗಾಯಾಳು ಚಾಲಯಿಸುತ್ತಿದ್ದ ವಾಹನ ಸಂಖ್ಯೆ ಸಾಕ್ಷಿ ಕೆಎ-01-ಇಹೆಚ್-6719 ಎಂದು ಹೇಳುತ್ತಾರೆ. ಅಪಘಾತವಾದ ನಂತರ ನಾನು ಸ್ಥಳ ತನಿಖೆ ಮಾಡಿದ್ದೇನೆ. ಸ್ಥಳ ಪಂಚನಾಮೆಯಲ್ಲಿ ಗಾಯಾಳು ಚಾಲಾಯಿಸುತ್ತಿದ್ದ ಗಾಡಿ ಸಂಖ್ಯೆಯನ್ನು ನಮೂದು ಮಾಡಿದ್ದೀರ ಎಂದರೇ ಹೌದು. ದಾಖಲೆ ನೋಡಿ ಹೇಳಬಹುದ ಎಂದರೇ ಮೂಲ ದಾಖಲಾತಿ ನೋಡಿ ಹೇಳಬಹುದು. ಮೂಲ ದಾಖಲೆಯನ್ನು ಹಾಜರುಪಡಿಸಿದ್ದೀರ ಎಂದರೇ ವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಗಾಯಾಳಿಗೆ ಡಿ ಎಲ್ ಇಲ್ಲದ ಕಾರಣ ಅದನ್ನು ಮಹಜರ್ ನಲ್ಲಿ ನಮೂದು ಮಾಡದೆ ಗಾಯಾಳುವಿಗೆ ಪರಿಹಾರವನ್ನು ಕೊಡಿಸುವ ಉದ್ದೇಶದಿಂದ ಬೇರೆ ವಾಹನದ ನಂಬರ್ ನ್ನು ನಮೂದು ಮಾಡಿದ್ದೇನೆ ಎಂದರೇ ಸರಿಯಲ್ಲ. ಅದೇ ರೀತಿ ಅಪಘಾತ ಪಡಿಸಿದ ವಾಹನದ ಚಾಲಕನಿಗೂ ಸಹ ಡಿ ಎಲ್ ಇರಲಿಲ್ಲ ಎಂದರೇ ಸರಿಯಲ್ಲ. ಆದ್ದರಿಂದ ಆರೋಪಿಯ ಡಿ ಎಲ್ ನ್ನು ಹಾಜರುಪಡಿಸಿಲ್ಲ ಎಂದರೇ ಸರಿಯಲ್ಲ.

3. ಅಂತಿಮ ವರದಿ ಸಲ್ಲಿಸುವ ಮುನ್ನ ಗಾಯಾಳುವಿನ ವೈದ್ಯಕೀಯ ದಾಖಲೆಗಳನ್ನು ನೋಡುತ್ತಿರ ಎಂದರೇ ಸಾಕ್ಷಿ ಅಂತಿಮ ವಾಗಿ ವೈದ್ಯರು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡುತ್ತೇವೆ. ಆ ದಾಖಲೆ ಅಲ್ಲದೆ ನಿಮಾನ್ಸ್ ಮತ್ತು ರಾಜ ರಾಜೇಶ್ವರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಾಖಲೆ ನೋಡಿದ್ದೀರ ಎಂದರೇ ಸಾಕ್ಷಿ ಅಂತಿಮ ವಾಗಿ ವೈದ್ಯರು ನೀಡಿದ ಗಾಯದ ಪ್ರಮಾಣ ಪತ್ರವನ್ನು ಮಾತ್ರ ನೋಡಿದ್ದೇನೆ.

ನಿಪಿ-12 ರ ಪ್ರಕಾರ ಗಾಯಾಳು ಮದ್ಯ ಪಾನ ಮಾಡಿ ವಾಹನವನ್ನು ಚಾಲಾಯಿಸುತ್ತಿದ್ದರು ಎಂದು ಇದೆ ಎಂದರೇ ನನಗೆ ಗೊತ್ತಿಲ್ಲ. ಯಾರು ನೀಡಿದ್ದಾರೆ ಅವರನ್ನು ಕೇಳಬೇಕು. ನಿಪಿ-8 ರ ಪ್ರಕಾರ ಕಾರು ಅಪಘಾತ ಪಡಿಸಿದ್ದರು ಸಹ ದ್ವಿ ಚಕ್ರ ವಾಹನವನ್ನು ಸಿಲುಕಿಸಿದ್ದೇವೆ ಎಂದರೇ ಸರಿಯಲ್ಲ. ಅಪಘಾತವಾದ ಎಷ್ಟು ದಿನ ಆದ ನಂತರ ವಾಹನ ತಪಾಸಣೆ ಮಾಡಿಸಿದ್ದೀರ ಎಂದರೇ ಸಾಕ್ಷಿ ದೂರನ್ನು 1ನೇ ತಾರೀಖು ನೀಡಿದ್ದು 6ನೇ ತಾರೀಖುನಂದು ವಾಹನ ತಪಾಸಣೆ ಮಾಡಿಸಿದ್ದೇವೆ. ಗಾಯಾಳು ಮತ್ತು ಆರೋಪಿ ಇಬ್ಬರಿಗೂ ಸಹ ಡಿ ಎಲ್ ಇಲ್ಲದೆ ಇದ್ದರು ಪರಿಹಾರವನ್ನು ದೊರಕಿಸಿಕೊಡುವ ಉದ್ದೇಶದಿಂದ ಅದರ ಬಗ್ಗೆ ತಿಳಿಸಿಲ್ಲ ಎಂದರೇ ಸರಿಯಲ್ಲ. ಅದೇ ರೀತಿ ಅಪಘಾತವಾದ ತುಂಬ ದಿನದ ನಂತರ ಬೇರೆ ವಾಹವನ್ನು ಸಿಲುಕಿಸುವ ಉದ್ದೇಶದಿಂದ ವಾಹನ ತಪಾಸಣೆ ಮಾಡಿಸಿಲ್ಲ ಎಂದರೇ ಸರಿಯಲ್ಲ. ಸಾಕ್ಷಿ ಮುಂದುವರೆದು 4 ಚಕ್ರ ವಾಹನ ಅಪಘಾತ ಪಡಿಸಿದ ಬಗ್ಗೆ ಯಾವುದೇ ಆಸ್ಪತ್ರೆಯಿಂದ ಮಾಹಿತಿಯನ್ನು ಸ್ವೀಕರಿಸಿರುವುದಿಲ್ಲ. ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಪಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)